ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015-16 ದಿನಾಂಕ: 24-11-2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | "ಅಂಕುರ" 'ಬೇಂದ್ರೆಯವರ ಬೆಳಗುಜಾವ ' ಒಂದು ಅವಲೋಕನ ಕರ್ನಾಟಕ ಸಾಹಿತ್ಯ ಅಕಾಡೆಮಿ ಕಾರ್ಯಕ್ರಮ<br><br>ಆಶಯ ಭಾಷಣ:<br><br>ಬಿ.ಎಂ. ಪಟೇಲ್ ಪಾಂಡು<br>ಸದಸ್ಯ ಸಂಚಾಲಕರು, ಕರ್ನಾಟಕ ಸಾಹಿತ್ಯ ಅಕಾಡೆಮಿ<br><br>ಉದ್ಘಾಟನೆ:<br><br>ಡಾ: ಆರ್. ನಾಗರತ್ನಮ್ಮ<br>ಪ್ರಾಚಾರ್ಯರು, ಬಿ.ಎಂ.ಎಸ್. ಮಹಿಳಾ ಪದವಿ ಕಾಲೇಜು<br><br>ಉಪನ್ಯಾಸ:<br><br>ಡಾ: ಹೆಚ್.ಎಸ್. ಸತ್ಯನಾರಾಯಣ<br>ಸಂಸ್ಕೃತಿ ಚಿಂತಕರು | 25-11-2015<br><br>ಬುಧವಾರ<br><br>ಮಧ್ಯಾಹ್ನ<br>2-00 ಗಂಟೆಗೆ | ಬಿ.ಎಂ.ಎಸ್. ಮಹಿಳಾ ಪದವಿಪೂರ್ವ ಕಾಲೇಜು, ಬಿ.ಎಸ್.ಎನ್. ಸಭಾಂಗಣ, ಬಸವನಗುಡಿ, ಬೆಂಗಳೂರು -4 |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

## ವಿಧಾನ ಮಂಡಲದಲ್ಲಿ ಇಂದು:

## ಶಾಸಕ ಜಗದೀಶ್‌ಕುಮಾರ್ ನಿಧನಕ್ಕೆ ವಿಧಾನ ಸಭೆ ಸಂತಾಪ

**ಬೆಂಗಳೂರು, ನವೆಂಬರ್ 24 (ಕರ್ನಾಟಕ ವಾರ್ತೆ**

ಇಂದು ಬೆಳಿಗ್ಗೆ ರಾಜ್ಯ ವಿಧಾನ ಸಭೆ ಸಮಾವೇಶಗೊಳ್ಳುತ್ತಿದ್ದಂತೆ ವಿಧಾನ ಸಭಾಧ್ಯಕ್ಷ ಶ್ರೀ ಕಾಗೋಡು ತಿಮ್ಮಪ್ಪ ಅವರು ನಿನ್ನೆ ನಿಧನರಾದ ಹೆಬ್ಬಾಳ ವಿಧಾನ ಸಭಾ ಕ್ಷೇತ್ರದ ಶಾಸಕ ಆರ್. ಜಗದೀಶ್‌ಕುಮಾರ್ ಅವರ ನಿಧನಕ್ಕೆ ಸಂತಾಪ ಸೂಚಕ ನಿರ್ಣಯ ಮಂಡಿಸಿದರು.

ಸಂತಾಪ ಸೂಚಕ ನಿರ್ಣಯ ಬೆಂಬಲಿಸಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಗದೀಶ್‌ಕುಮಾರ್ ಅವರ ನಿಧನ ಸದನಕ್ಕೆ ಹಾಗೂ ಸಾರ್ವಜನಿಕ ಜೀವನಕ್ಕೆ ತುಂಬಲಾರದ ನಷ್ಟ ಎಂದು ಹೇಳಿದರು. ಸಂತಾಪ ಸೂಚಕ ನಿರ್ಣಯ ಬೆಂಬಲಿಸಿ ಮಾತನಾಡಿದ ವಿಧಾನ ಸಭೆ ವಿರೋಧ ಪಕ್ಷದ ನಾಯಕ ಜಗದೀಶ್ ಶೆಟ್ಟರ್, ಶಾಸಕರುಗಳಾದ ಎಸ್. ಸುರೇಶ್‌ಕುಮಾರ್, ಮುನಿರತ್ನ, ಚೆಲುವರಾಯಸ್ವಾಮಿ, ಸಿ.ಟಿ. ರವಿ, ಕೆ.ಎಸ್. ಪುಟ್ಟಣ್ಣಯ್ಯ, ಕೋನರೆಡ್ಡಿ, ರಾಜೀವ್, ಕೆ. ಶಿವಮೂರ್ತಿ, ಪ್ರಮೋದ್ ಮದ್ವರಾಜ್, ಶಿವಲಿಂಗೇಗೌಡ ಹಾಗೂ ಕೆ.ಆರ್. ರಮೇಶ್‌ಕುಮಾರ್ ಅವರುಗಳು ಮೃತರ ಗುಣಗಾನ ಮಾಡಿದರು.

ವಿಧಾನ ಸಭಾಧ್ಯಕ್ಷ ಕಾಗೋಡು ತಿಮ್ಮಪ್ಪ ಅವರು ಸಂತಾಪ ಸೂಚಕ ನಿರ್ಣಯ ಅಂಗೀಕರಿಸಿದರು. ನಂತರ ಮೃತರ ಗೌರವಾರ್ಥ ವಿಧಾನ ಸಭೆ ಒಂದು ನಿಮಿಷ ಮೌನ ಆಚರಿಸಿ ನಾಳೆಗೆ ಮುಂದೂಡಿದರು.

ಬಾಬು/ಕೆಎಂ

## ಡಿ.ಇಡಿ ಪೂರಕ ಪರೀಕ್ಷೆ

**ಬೆಂಗಳೂರು, ನವೆಂಬರ್ 24 (ಕರ್ನಾಟಕ ವಾರ್ತೆ**

ಪ್ರಥಮ ಮತ್ತು ದ್ವಿತೀಯ ಡಿ.ಇಡಿ ಪೂರಕ ಪರೀಕ್ಷೆಯನ್ನು ದಿನಾಂಕ:14.12.2015ರಿಂದ 19.12.2015ರವರೆಗೆ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ವತಿಯಿಂದ ನಡೆಸಲಾಗುವುದೆಂದು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಪ್ರಕಟಣೆ ತಿಳಿಸಿದೆ.

ಪಲ್ಲವಿ/ಬಾಬು/ಕೆಎಂ